**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 204/2019**

| | | | |
|---|---|---|---|
| **ಹೆಸರು** | : | **ಮಹೇಶ** | ಚಾ.ಸಾ. 4 |
| **ತಂದೆ ಹೆಸರು** | : | **ರಾಜಪ್ಪ** | ಪ್ರಾ.ಸಾ. 2 |
| **ವಯಸ್ಸು** | : | **26 ವರ್ಷ** | ದಿನಾಂಕಃ 23-11-2024 |
| **ಉದ್ಯೋಗ** | : | **ಹೋಟೆಲ ಕೆಲಸ** | |
| **ವಾಸಸ್ಥಳ** | : | **ದುತ್ತರಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ 1 ನನ್ನ ಅಕ್ಕ. ಚಾಸಾ 2, 3, 5 ಮತು 6 ರವರು ನನಗೆ ಗೊತ್ತು ಅವರು ನಮ್ಮ ಪಕ್ಕ ಪಕ್ಕದ ಮನೆಯವರು. ಆರೋಪಿತರು ನಮ್ಮ ಪಕ್ಕದ ಮನೆಯವರು.

ಈಗ 10 ವರ್ಷಗಳ ಹಿಂದೆ ಮಧ್ಯಾಹ್ನ 1-30 ಗಂಟೆ ಸುಮಾರಿಗೆ ಕೆಲಸ ಮಾಡಿಕೊಂಡು ಮನೆಗೆ ಹೋಗುತ್ತಿರುವಾಗ 1 ಮತ್ತು 2ನೇ ಆರೋಪಿತರು ನನಗೆ ತಡೆದು ನಿಲ್ಲಿಸಿ ನಮಗೆ ಆಸ್ತಿ ವಿಷಯವಾಗಿ ನನಗೆ ಹೊಡೆದಿರುತ್ತಾರೆ. ನೀನು ಇಲ್ಲಿ ಯಾಕೆ ಬಂದಿದ್ದೀಯಾ,ಇಲಿ ಬರಬೇಡ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 1ನೇ ಆರೋಪಿ ಬಡಿಗೆಯಿಂದ ಬಲಭುಜಕ್ಕೆ ಹೊಡೆದಿರುತ್ತಾನೆ. 2ನೇ ಆರೋಪಿ ಕೈಮುಷ್ಠಿ ಮಾಡಿ ಹೊಟ್ಟೆಗೆ ಹೊಡೆದಿರುತ್ತಾನೆ. ಆಗ ಚಾಸಾ 1 ಮತ್ತು 6 ರವರು ಬಿಡಿಸಲು ಬಂದಾಗ 3ನೇ ಆರೋಪಿತಳು ಚಾಸಾ 1 ರವರಿಗೆ ಈ ರಂಡಿದು ಬಹಳ ಆಗಿದೆ ಎಂದು ಹೇಳಿ ಕಲಿನಿಂದ ಚಾಸಾ 1 ರವರು ಕಲ್ಲಿನಿಂದ ಬಲಭುಜಕ್ಕೆ ಹೊಡೆದಿರುತ್ತಾರೆ. ನಂತರ ನಾವು ಗುಲ್ಬರ್ಗಾ ಸರಕಾರಿ ಆಸ್ಪತ್ರೆಗೆ ಹೋಗಿ ಸೇರಿಕೆ ಆಗಿರುತ್ತೇವೆ. ನಂತರ ಪೋಲಿಸರು ಬಂದು ಘಟನೆ ಬಗ್ಗೆ ವಿಚಾರಣೆ ಮಾಡಿದ್ದಾರೆ. ಆಗ ನಾನು ಪೋಲಿಸರಿಗೆ ಘಟನೆ ಬಗ್ಗೆ ಹೇಳಿದ್ದೇನೆ.

ಆ ದಿನ ಹಲ್ಲೆಗೆ ಬಳಸಿರುವ ಕಲ್ಲು ಮತ್ತು ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಕಲ್ಲು ಮತ್ತು ಬಡಿಗೆಯನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ. 1 ಮತ್ತು 2 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆರೋಪಿತರು ನನಗೆ ರಂಡಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಚಾಸಾ 5 ಮತ್ತು 6 ರವರು ಜಗಳ ಬಿಡಿಸಲು ಬಂದಾಗ ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ KVB ವಕೀಲರಿಂದಃ</u>**

ನಾನು ಬಾಂಬೆಯಲ್ಲಿ ಕೆಲಸ ಮಾಡುತ್ತೇನೆ. 1 ವರ್ಷದಲ್ಲಿ 1 ರಿಂದ 2 ಬಾರಿ ನಮ್ಮ ಊರಿಗೆ ಹೋಗುತ್ತೇನೆ. ನಮ್ಮ ಕುಟುಂಬದಲ್ಲಿ ಒಟ್ಟು 31 ಜನರು ಇದ್ದೇವೆ. ಆರೋಪಿತರ ಮನೆಯಲ್ಲಿ 4 ಜನರು ಮಾತ್ರಾ ಇದ್ದಾರೆ ಎಂದರೆ ಸರಿ. ಆರೋಪಿತರು ಸುನಿತಾ ರವರಿಗೆ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿ. 2ನೇ ಆರೋಪಿ ಮತ್ತು ನನ್ನ ತಂದೆ ಮಧ್ಯೆ ಆಸ್ತಿ ವಿಷಯವಾಗಿ ಜಗಳವಿದೆ ಎಂದರೆ ಸರಿ. ಸದರಿ ಜಗಳದ ವಿಷಯವಾಗಿ ಆರೋಪಿತರು ಮತ್ತು ನನ್ನ ತಂದೆ ಮಧ್ಯೆ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿ. ನನ್ನ ತಂದೆ ಆರೋಪಿತರ ವಿರುದ್ದ 3 ಪಕರಣಗಳು ದಾಖಲಿಸಿದ್ದಾರೆ ಎಂದರೆ ಸರಿ. ನಮ್ಮ ಊರಿನಲ್ಲಿ ಮನೆಗಳನ್ನು ಕರಿಬಣ್ಣದ ಕಲ್ಲಿನಿಂದ ಕಟ್ಟಿದ್ದಾರೆ ಎಂದರೆ ಸರಿ. ಈ ತರಹದ ಕಲ್ಲುಗಳು ನಮ್ಮ ಊರಿನಲ್ಲಿ ಬಹಳಷ್ಟು ಇವೆ ಎಂದರೆ ಸರಿ. ನಮ್ಮದು ಒಕ್ಕಲುತನ ಮನೆತನ ಎಂದರೆ ಸರಿ. 2ನೇ ಆರೋಪಿ ಪ್ಲಾಸ್ಟರಿಂಗ ಕೆಲಸ ಮಾಡುತ್ತಾನೆ ಎಂದರೆ ಸರಿ. 2ನೇ ಆರೋಪಿ ಸುಲೇಪೇಟ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗಾಗ ಬಂದುಹೋಗುತ್ತಾನೆ ಎಂದು ನುಡಿಯುತ್ತಾರೆ.

ಮು.ಮಾ. 2 ತರಹದ ಬಡಿಗೆ ರಾಶಿ ಮಾಡಿ ಬಡೆಯಲು ಉಪಯೋಗಿಸುತ್ತಾರೆ ಎಂದರೆ ಸರಿ. ಮು.ಮಾ. 2 ತರಹದ ಬಡಿಗೆ ಒಕ್ಕಲುತನ ಇರುವವರ ಮನೆಯಲಿ ಬಹಳಷ್ಟು ಇರುತ್ತದೆ ಎಂದರೆ ಸರಿ. 2ನೇ ಆರೋಪಿ ಬಡಿಗೆಯಿಂದ ಅಥವಾ ಕಲ್ಲಿನಿಂದ ಹೊಡದಿಲ್ಲ ಎಂದರೆ ಸರಿಯಲ್ಲ. ಸಾಮಾನವಾಗಿ ಮು.ಮಾ. 1 ಮತ್ತು 2 ರಿಂದ ಹೊಡೆದಾಗ ಬಹಳಷ್ಟು ರಕ್ತ ಬರುತ್ತದೆ ಎಂದರೆ ಸರಿ.

ಕಾಳಗಿಯಲ್ಲಿ ದೊಡ್ಡ ಆಸ್ಪತ್ರೆ ಇದೆ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತಮ್ಮ ಬಲಗೈಯಿಂದ ಇನ್ನೊಬ್ಬ ವ್ಯಕ್ತಿಯ ಬಲಗೈಗೆ ಕಲ್ಲಿನಿಂದ ಹೊಡೆಯಲು ಬರುವುದಿಲ್ಲ ಎಂದರೆ ಸರಿ. ಆರೋಪಿತರು ಎಲ್ಲರೂ ಬಲಗೈ ಉಪಯೋಗಿಸುತ್ತಾರೆ ಎಂದರೆ ಸರಿ. ಆರೋಪಿತರಿಗೆ ಊರಿನಿಂದ ಓಡಿಸಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**